# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಎಂವೈಎಸ್/1614/2022
ಮಂಡನಾಧಿಕಾರಿಗಳ ಶಾಖೆ, ಎಆರ್ಇ-18

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 27/10/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀ ಆರ್.ರವಿಕುಮಾರ ತಂದೆ ದಿ:ರಂಗಸ್ವಾಮಿ, ಕಾರ್ಮಿಕ ನಿರೀಕ್ಷಕರು, ಉಡುಪಿ, 1ನೇ ವೃತ್ತ, ಕಾರ್ಮಿಕ ಅಧಿಕಾರಿಯವರ ಕಛೇರಿ, ರಜತಾದ್ರಿ ಮಣಿಪಾಲ, ಉಡುಪಿ ಜಿಲ್ಲೆ, ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

ಉಡುಪಿ ಜಿಲ್ಲೆ, ಕರ್ನಾಟಕ ಲೋಕಾಯುಕ್ತ, ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಆರ್.ರವಿಕುಮಾರ ತಂದೆ ದಿ:ರಂಗಸ್ವಾಮಿ, ಕಾರ್ಮಿಕ ನಿರೀಕ್ಷಕರು, ಉಡುಪಿ, 1ನೇ ವೃತ್ತ, ಕಾರ್ಮಿಕ ಅಧಿಕಾರಿಯವರ ಕಛೇರಿ, ರಜತಾದ್ರಿ ಮಣಿಪಾಲ, ಉಡುಪಿ ಜಿಲ್ಲೆ. (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ಮೋಹನ ಕೊಟ್ಟಾರಿ, ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಉಡುಪಿ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರಿಗೆ ಕಾರ್ಮಿಕ ಇಲಾಖೆಯ ಕಛೇರಿ ಅಧಿಕಾರಿಯಾದ ಎದುರುದಾರರು ಹಾಗೂ ಸಿಬ್ಬಂದಿಯವರು ಅಂಗಡಿ ಹಾಗೂ ವಾಣಿಜ್ಯ ಉದ್ದೇಶಗಳಿಗೆ ಕಾರ್ಮಿಕ ಇಲಾಖೆಯಿಂದ ಹೊಸದಾಗಿ ಪರವಾನಿಗೆಗಳನ್ನು ನೀಡಲು ಹಾಗೂ ಪರವಾನಿಗೆಗಳನ್ನು ನವೀಕರಿಸಲು ಲಂಚದ ಬೇಡಿಕೆಯನ್ನು ಇಟ್ಟು ಅಕ್ರಮ ಹಣವನ್ನು ಸಂಗ್ರಹಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2) **ಪ್ರಕರಣದ ಸಂಕ್ಷಿಪ್ತ ಸಾರಾಂಶ:-** ಉಡುಪಿ ಲೋಕಾಯುಕ್ತ ಪೋಲೀಸ್ ಠಾಣೆಯ, ಪೋಲೀಸ್ ನಿರೀಕ್ಷಕರು, ಮೋಹನ ಕೊಟ್ಟಾರಿ ರವರು ದಿ: 30-07-2014 ರಂದು ಕಛೇರಿ ಕರ್ತವ್ಯದಲ್ಲಿರುವಾಗ ಮಧ್ಯಾಹ್ನ ಸುಮಾರು 12.00 ಗಂಟೆ ಸಮಯದಲ್ಲಿ ಉಡುಪಿ ಜಿಲ್ಲೆಯ ಮಣಿಪಾಲ ರಜತಾದ್ರಿ ಎಂಬಲ್ಲಿರುವ ಕಾರ್ಮಿಕ ಇಲಾಖೆಯ ಕಛೇರಿ ಅಧಿಕಾರಿಯಾದ ಎದುರುದಾರರು ಹಾಗೂ ಸಿಬ್ಬಂದಿಯವರು ಅಂಗಡಿ ಹಾಗೂ ವಾಣಿಜ್ಯ ಉದ್ದೇಶಗಳಿಗೆ ಕಾರ್ಮಿಕ ಇಲಾಖೆಯಿಂದ ಹೊಸದಾಗಿ ಪರವಾನಿಗೆಗಳನ್ನು ನೀಡಲು ಹಾಗೂ

ಪರವಾನಿಗೆಗಳನ್ನು ನವೀಕರಿಸಲು ಲಂಚದ ಬೇಡಿಕೆಯನ್ನು ಇಟ್ಟು ಅಕ್ರಮ ಹಣವನ್ನು ಸಂಗ್ರಹಿಸುತ್ತಿರುವ ಬಗ್ಗೆ ಖಚಿತ ವರ್ತಮಾನ ಬಂದ ಮೇರೆಗೆ ಪೋಲಿಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಉಡುಪಿರವರು ಎದುರುದಾರರ ವಿರುದ್ಧ ಉಡುಪಿ ಲೋಕಾಯುಕ್ತ ಠಾಣಾ ಮೊ.ನಂ. 07/2014 ಕಲಂ 7, 13 (1) (ಡಿ) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ರಂತೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

3) ತನಿಖಾಧಿಕಾರಿಯವರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡ ನಂತರ ಪ್ರಥಮ ವರ್ತಮಾನ ವರದಿಯನ್ನು ಉಡುಪಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ನಿವೇದಿಸಿಕೊಂಡು ಎದುರುದಾರರ ಕಛೇರಿಯನ್ನು ಶೋಧನೆ ಮಾಡಲು ನ್ಯಾಯಾಲಯದಿಂದ ಅಧಿಕಾರ ಪತ್ರವನ್ನು ಪಡೆದುಕೊಂಡು ಉಡುಪಿ ಜಿಲ್ಲೆಯ ಮಣಿಪಾಲ ರಜತಾದ್ರಿ ಎಂಬಲ್ಲಿರುವ ಕಾರ್ಮಿಕ ಇಲಾಖೆ ಅಧಿಕಾರಿಯವರ ಕಛೇರಿಗೆ ಶೋಧನಾ ಪಂಚನಾಮೆ ಮಾಡಲು ಹೋಗಬೇಕಾಗಿದ್ದರಿಂದ ದಿ: 30-07-2014 ರಂದು ಸರ್ಕಾರಿ ಪಂಚರಾದ ಶ್ರೀ ನಿತ್ಯಾನಂದ ಎಸ್. ತಂದೆ ಸೋಮ್ ಎಸ್ ಮತ್ತು ಶ್ರೀ ಎಸ್.ಎಲ್ ರತ್ನಾಕರ್ ತಂದೆ ಲಕ್ಷ್ಮಣ ಆಚಾರ್‌ರವರನ್ನು ಠಾಣೆಗೆ ಪಂಚರನ್ನಾಗಿ ಕರೆಯಿಸಿ ಪಂಚರಿಗೆ ತಮ್ಮನ್ನು ಪರಿಚಯಿಸಿಕೊಂಡು ಅವರ ಪರಿಚಯ ಮಾಡಿಕೊಂಡಿರುತ್ತಾರೆ. ನಂತರ ಪಂಚರಿಗೆ ಪ್ರಥಮ ವರ್ತಮಾನ ವರದಿಯು ದಾಖಲಾಗಿರುವ ಬಗ್ಗೆ ತಿಳಿಸಿ ಪ್ರಥಮ ವರದಿಯಲ್ಲಿರುವ ದೂರಿನ ಅಂಶವನ್ನು ವಿವರಿಸಿ ಪ್ರಥಮ ವರ್ತಮಾನ ವರದಿಯನ್ನು ಓದಲು ನೀಡಿರುತ್ತಾರೆ. ಪಂಚರು ಅದನ್ನು ಓದಿ ನೋಡಿ ವಿಷಯವನ್ನು ತಿಳಿದುಕೊಂಡ ನಂತರ ತನಿಖಾಧಿಕಾರಿಯವರು ಜಿಲ್ಲಾ ಸತ್ರ ಮತ್ತು ವಿಶೇಷ ನ್ಯಾಯಾಲಯ ಉಡುಪಿ ರವರಿಂದ ಶೋಧನೆ ಮಾಡಲು ಅಧಿಕಾರ ಪತ್ರ ಪಡೆದುಕೊಂಡಿರುವುದಾಗಿ ತಿಳಿಸಿದ ನಂತರ ಪಂಚರು ಹಾಗೂ ಉಡುಪಿ ಪೋಲಿಸ್ ಲೋಕಾಯುಕ್ತ ಠಾಣೆಯ ತನಿಖಾಧಿಕಾರಿಯವರು ಹಾಗೂ ಅವರ ಸಿಬ್ಬಂದಿಯವರು ಪರಸ್ಪರ ತಮ್ಮ ಅಂಗ ಶೋಧನೆ ಮಾಡಿಕೊಂಡಾಗ ಯಾರಲ್ಲಿಯೂ ಸಹ ಅಪಾಯಕಾರಿಯಾದ ವಸ್ತುಗಳು ಹಾಗೂ ಹೆಚ್ಚಿನ ಮೊತ್ತದ ಹಣವಿರುವುದಿಲ್ಲವೆನ್ನುವುದನ್ನು ಖಚಿತಪಡಿಸಿಕೊಂಡ ಬಳಿಕ ಇಲಾಖಾ ವಾಹನಗಳಲ್ಲಿ ಉಡುಪಿ ಲೋಕಾಯುಕ್ತ ಕಛೇರಿಯಿಂದ ಸುಮಾರು 3.45 ಗಂಟೆಗೆ ಹೊರಟು ಸುಮಾರು 4.10 ಗಂಟೆಗೆ ಮಣಿಪಾಲ ರಜತಾದ್ರಿ ತಲುಪಿ ವಾಹನಗಳನ್ನು ರಜತಾದ್ರಿಯ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿ ಅಲ್ಲಿಂದ ಪಂಚರು ಹಾಗೂ ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರೊಂದಿಗೆ ಮಣಿಪಾಲ ರಜತಾದ್ರಿಯಲ್ಲಿರುವ ಕಾರ್ಮಿಕ ಇಲಾಖೆಯ, ಕಾರ್ಮಿಕ ಅಧಿಕಾರಿಯವರ ಕಛೇರಿಯ ಬಳಿ ಬಂದಾಗ ತನಿಖಾಧಿಕಾರಿಯವರು ಕಛೇರಿಯ ಮುಂಭಾಗದ ಬಳಿ ಸಿಬ್ಬಂದಿಯವರನ್ನು ನಿಯೋಜಿಸಿ ನಂತರ ಕಛೇರಿಯ ಒಳಗೆ ಪ್ರವೇಶಿಸಿ ಮುಂಭಾಗದಲ್ಲಿರುವ ಹಾಲ್‌ಗೆ ಬಂದಾಗ, ಅಲ್ಲಿ ಕುಳಿತಿದ್ದ ಕಛೇರಿಯ ಸಿಬ್ಬಂದಿಯವರಿಗೆ ತನಿಖಾಧಿಕಾರಿಯವರು ತಮ್ಮ ಗುರುತಿನ ಚೀಟಿಯನ್ನು ತೋರಿಸಿ ಪರಿಚಯ ತಿಳಿಸಿ ಯಥಾಸ್ಥಿತಿಯಲ್ಲಿ ಕುಳಿತುಕೊಳ್ಳುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಸದರಿ ಹಾಲಿನ ಉತ್ತರಕ್ಕಿರುವ ಕೋಣೆಯ ಗೋಡೆಯ ಮೇಲೆ ಹೆಚ್.ಪಿ.ಜ್ಞಾನೇಶ, ಕಾರ್ಮಿಕ ಅಧಿಕಾರಿಯೆಂದು ಬರೆದಿರುವ ನಾಮಫಲಕವಿರುವ ಕೋಣೆಯನ್ನು ಪ್ರವೇಶಿಸಿ ಅವರಿಗೆ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ಅವರಿಗೆ ಕರ್ತವ್ಯಕ್ಕೆ ಹಾಜರಾದ ಸಮಯದಲ್ಲಿ ಹಣದ ವಿವರಗಳನ್ನು ಬರೆದಿರುವ ನಗದು ಪುಸ್ತಕದ ಬಗ್ಗೆ ವಿಚಾರಿಸಿದಾಗ ತಾನು ಹಾಗೂ ಸಿಬ್ಬಂದಿಯವರು ಕರ್ತವ್ಯಕ್ಕೆ ಹಾಜರಾದ ಸಮಯದಲ್ಲಿ ಹಣದ ವಿವರಗಳನ್ನು ಬರೆದಿರುವ ನಗದ

ಪುಸ್ತಕವನ್ನು ತೆರೆದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಅವರಿಗೆ ಲೋಕಾಯುಕ್ತ ಠಾಣೆಯಲ್ಲಿ ದಾಖಲಾದ ಪ್ರ.ವ. ವರದಿಯನ್ನು ಮತ್ತು ಶೋಧನಾ ಪತ್ರವನ್ನು ತೋರಿಸಿ ಕಛೇರಿಯ ಶೋಧನೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ಕಾರ್ಮಿಕ ಅಧಿಕಾರಿಯಾದ ಶ್ರೀ ಹೆಚ್.ಪಿ. ಜ್ಞಾನೇಶ ಅವರನ್ನು ಜಡ್ತಿ ಮಾಡಿದಾಗ ಅವರ ಪ್ಯಾಂಟ್ ಜೇಬಿನಲ್ಲಿದ್ದ ಪರ್ಸ್‌ನಲ್ಲಿ ರೂ.570/- ಗಳಿದ್ದು, ಅವರು ಅವುಗಳನ್ನು ತಮ್ಮ ಸ್ವಂತ ಖರ್ಚಿಗಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದರಿಂದ ಅವುಗಳನ್ನು ಅವರ ವಶಕ್ಕೆ ಬಿಟ್ಟಿರುತ್ತಾರೆ. ಸದರಿಯವರ ಟೇಬಲ್‌ನ್ನು ಪರಿಶೀಲಿಸಿದಾಗ ಯಾವುದೇ ನಗದು ಹಣ ದೊರೆತಿರುವುದಿಲ್ಲ. ಸದರಿ ಹಾಲಿನ ಪೂರ್ವ-ದಕ್ಷಿಣಕ್ಕೆ ಒಂದು ಸ್ಟೀಲ್ ಕಪಾಟು ಇದ್ದು, ಅದನ್ನು ಪರಿಶೀಲಿಸಿದಾಗ ಅದರಲ್ಲಿ ಯಾವುದೇ ನಗದು ಹಣ ದೊರೆತಿರುವುದಿಲ್ಲ. ಸದರಿ ಕಪಾಟಿನ ಉತ್ತರಕ್ಕೆ ಮತ್ತೊಂದು ಸ್ಟೀಲ್ ಕಪಾಟು ಇದ್ದು, ಅದರಲ್ಲಿಯೂ ಸಹ ಯಾವುದೇ ನಗದು ಹಣ ದೊರೆತಿರುವುದಿಲ್ಲ. ಸದರಿ ಹಾಲಿನ ಉತ್ತರ-ಪಶ್ಚಿಮ ಬದಿಯಲ್ಲಿ ಒಂದು ಕಂಪ್ಯೂಟರ್ ಟೇಬಲ್ ಮತ್ತು ಕಂಪ್ಯೂಟರ್ ಚೇರ್ ಇದ್ದು, ಕಂಪ್ಯೂಟರ್ ಕುರ್ಚಿಯಲ್ಲಿ ಒಬ್ಬ ಮಹಿಳೆಯು ಕುಳಿತಿದ್ದು, ತನಿಖಾಧಿಕಾರಿಯವರು ಅವರ ಹೆಸರನ್ನು ಕೇಳಿದಾಗ ಅವರು ತನ್ನ ಹೆಸರು ಚೈತನ್ಯ ತಾನು ಕಂಪ್ಯೂಟರ್ ಆಪರೇಟರ್(ಖಾಸಗಿ ನೌಕರಿ) ಎಂಬುದಾಗಿ ತಿಳಿಸಿದ್ದರಿಂದ ಅವರ ಬಳಿ ಇದ್ದ ಬ್ಯಾಗನ್ನು ಸಿಬ್ಬಂದಿಯವರ ಮುಖಾಂತರ ಪರಿಶೀಲಿಸಿದಾಗ ಅದರಲ್ಲಿ ಒಂದು ಪರ್ಸ್ ಇದ್ದು, ಪರ್ಸ್‌ನಲ್ಲಿ ರೂ.55 ಹಣವಿರುವುದು ಕಂಡುಬಂದಿದ್ದರಿಂದ ಅವರ ಸದರಿ ಹಣವನ್ನು ತನ್ನ ದೈನಂದಿನ ಖರ್ಚಿಗಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿದ ಮೇರೆಗೆ ಆ ಹಣವನ್ನು ಅವರ ವಶಕ್ಕೆ ಬಿಟ್ಟುಕೊಡಲಾಗಿರುತ್ತದೆ. ಸದರಿ ಹಾಲ್‌ನಲ್ಲಿ ಕಛೇರಿಗೆ ಸಂಬಂಧಿಸಿದ ಯಾವುದೇ ನಗದು ಹಣ ದೊರೆತಿರುವುದಿಲ್ಲ.

4) ಹಾಲಿನ ಉತ್ತರ-ಪಶ್ಚಿಮ ಬದಿಯಲ್ಲಿರುವ ಕಂಪಾರ್ಟ್‌ಮೆಂಟ್ ಒಳಗಡೆ ಒಬ್ಬರು ಕುಳಿತಿದ್ದು, ತನಿಖಾಧಿಕಾರಿಯವರು ಅವರ ಹೆಸರನ್ನು ಕೇಳಿದಾಗ ಅವರು ಪ್ರವೀಣಕುಮಾರ, ಎಫ್.ಡಿ.ಎ ಎಂದು ತಿಳಿಸಿದಾಗ, ತನಿಖಾಧಿಕಾರಿಯವರು ಶೋಧನೆ ಮಾಡಿದಾಗ ಅವರ ಪ್ಯಾಂಟ್ ಜೇಬಿನ ಪರ್ಸ್‌ನಲ್ಲಿ ರೂ.1,650/- ನಗದು ಹಣವಿದ್ದು, ಅದರ ಬಗ್ಗೆ ಅವರಿಗೆ ವಿಚಾರಿಸಿದಾಗ ಅವರು ಎಸ್.ಬಿ.ಐ ಪಾಸ್‌ಬುಕ್‌ನ್ನು ಹಾಜರಪಡಿಸಿ ತಾನು ದಿ:22-07-2014 ರಂದು ರೂ. 9,000/- ಹಣವನ್ನು ತೆಗೆದಿದ್ದು, ಅದರಲ್ಲಿ ಖರ್ಚಾಗಿ ರೂ. 1,650/- ಹಣ ಉಳಿದಿದ್ದು, ಅದು ತನ್ನ ದೈನಂದಿನ ಖರ್ಚಿಗಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದರಿಂದ ಸದರಿ ಹಣವನ್ನು ಅವರ ವಶಕ್ಕೆ ಬಿಡಲಾಗಿರುತ್ತದೆ. ಪ್ರವೀಣಕುಮಾರವರು ಕುಳಿತಿದ್ದ ಟೇಬಲ್‌ನ್ನು ಮತ್ತು ಕಂಪಾರ್ಟ್‌ಮೆಂಟ್‌ನ್ನು ಪರಿಶೀಲಿಸಿದಾಗ ಕಛೇರಿಗೆ ಸಂಬಂಧಿಸಿದ ನಗದು ಹಣ ದೊರೆತಿರುವುದಿಲ್ಲ.

5) ಸದರಿ ಕಂಪಾರ್ಟ್‌ಮೆಂಟ್‌ನ ಪೂರ್ವಬದಿಯಲ್ಲಿ ಪ್ಯಾಸೇಜ್ ಇದ್ದು, ಅದರಿಂದ ಪೂರ್ವಕ್ಕೆ ಇನ್ನೊಂದು ಕಂಪಾರ್ಟ್‌ಮೆಂಟ್ ಇದ್ದು, ಸದರಿ ಕಂಪಾರ್ಟ್‌ಮೆಂಟ್‌ನಲ್ಲಿ ಒಂದು ಟೇಬಲ್ ಇದ್ದು, ಟೇಬಲ್ ಎದುರುಗಡೆ ಒಬ್ಬ ಮಹಿಳೆ ಕುಳಿತಿದ್ದು, ಅವರ ಹೆಸರನ್ನು ತನಿಖಾಧಿಕಾರಿಯವರು ಕೇಳಿದಾಗ ಅವರು ತಮ್ಮ ಹೆಸರು ತಾರಾ ಎಂದು ತಿಳಿಸಿರುತ್ತಾರೆ. ಆಗ ಅವರ ಬಳಿಯಿದ್ದ ಬ್ಯಾಗನ್ನು ತನಿಖಾಧಿಕಾರಿಯವರ ಸಿಬ್ಬಂದಿಯವರು ಪರಿಶೀಲಿಸಿದ್ದು, ಅದರಲ್ಲಿ ಒಂದು ಪರ್ಸ್ ಇದ್ದು, ಪರ್ಸ್‌ನಲ್ಲಿ ರೂ.400/- ಹಣ ಇದ್ದು, ಹಣದ ಬಗ್ಗೆ ವಿಚಾರಿಸಲಾಗಿ, ತನ್ನ ದೈನಂದಿನ ಖರ್ಚಿಗಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿದ ಮೇರೆಗೆ ಆ ಹಣವನ್ನು ಅವರ ವಶಕ್ಕೆ ಬಿಟ್ಟುಕೊಟ್ಟಿರುತ್ತಾರೆ. ಸದರಿಯವರ ಪಕ್ಕದಲ್ಲಿ ಇನ್ನೊಂದು ಟೇಬಲ್ ಇದ್ದು, ಅದರ

ಎದುರು ಒಬ್ಬ ಮಹಿಳೆ ಖುರ್ಚಿಯಲ್ಲಿ ಕುಳಿತಿದ್ದು ಅವರ ಹೆಸರು ಕೇಳಲಾಗಿ, ಅವರು ತಮ್ಮ ಹೆಸರು ರೇವತಿ ಎಂಬುದಾಗಿ ತಿಳಿಸಿ, ತಾನು ಕಂಪ್ಯೂಟರ್ ಆಪರೇಟರ್ (ಖಾಸಗಿ ನೌಕರಿ) ಎಂಬುದಾಗಿ ತಿಳಿಸಿದ್ದರಿಂದ ಅವರ ಬಳಿಯಿದ್ದ ಬ್ಯಾಗನ್ನು ತನಿಖಾಧಿಕಾರಿಯವರ ಸಿಬ್ಬಂದಿಯವರು ಪರಿಶೀಲಿಸಿದಾಗ ಅದರಲ್ಲಿ ಒಂದು ಪರ್ಸ್ ಇದ್ದು, ಪರ್ಸಿನಲ್ಲಿ ರೂ.70/- ಹಣ ಇದ್ದು, ಹಣದ ಬಗ್ಗೆ ಅವರಿಗೆ ವಿಚಾರಿಸಿದಾಗ ಅವರು ತಮ್ಮ ದೈನಂದಿನ ಖರ್ಚಿಗಾಗಿ ಇಟ್ಟುಕೊಂಡಿರುವುದಾಗಿ ತಿಳಿಸಿದ ಕಾರಣ, ಸದರಿ ಹಣವನ್ನು ಅವರ ವಶಕ್ಕೆ ಬಿಟ್ಟುಕೊಟ್ಟಿರುತ್ತಾರೆ.

6) ಶ್ರೀ. ಪ್ರವೀಣ್ ಕುಮಾರ್, ಎಫ್.ಡಿ.ಎ. ರವರು ಕುಳಿತುಕೊಳ್ಳುವ ಕಂಪಾರ್ಟ್‌ಮೆಂಟಿನ ದಕ್ಷಿಣಬದಿಯ ಪ್ಯಾಸೇಜ್‌ನಲ್ಲಿ ಒಂದು ಟೇಬಲ್ ಇದ್ದು, ಟೇಬಲ್ ಎದುರು ಖುರ್ಚಿಯಲ್ಲಿ ಕುಳಿತ್ತಿದ್ದ ಮಹಿಳೆಯ ಹೆಸರನ್ನು ಕೇಳಲಾಗಿ ಅವರು ತಮ್ಮ ಹೆಸರು ಶ್ರೀಮತಿ. ಕುಸುಮ ಸತ್ಯವತಿ ಎಂದು ಹೇಳಿದ್ದು, ಅವರ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ ಒಂದು ಪರ್ಸ್ ಇದ್ದು, ಪರ್ಸಿನಲ್ಲಿ ರೂ.1510/- ಹಣ ಇದ್ದು, ಹಣದ ಬಗ್ಗೆ ವಿಚಾರಿಸಿದಾಗ ಅವರು ತಮ್ಮ ತುಂಡಾದ ಕರಿಮಣಿಸರ ರಿಪೇರಿಗಾಗಿ ಮನೆಯಿಂದ ಕೆಲಸಕ್ಕೆ ಬರುವಾಗ ಹಣವನ್ನು ತಂದಿರುವುದಾಗಿ ತಿಳಿಸಿದ ಮೇರೆಗೆ ಆ ಹಣವನ್ನು ಅವರ ವಶಕ್ಕೆ ಬಿಟ್ಟುಕೊಟ್ಟಿರುತ್ತಾರೆ.

7) ಸದರಿ ಕಛೇರಿಯ ಅಟೆಂಡರ್ ಆದ ಶ್ರೀಮತಿ. ಕುಸುಮರವರು ಕುಳಿತುಕೊಳ್ಳುವ ಟೇಬಲ್‌ನ ದಕ್ಷಿಣಕ್ಕೆ ಒಂದು ಕೊಠಡಿ ಇದ್ದು, ಸದರಿ ಕೋಣೆಯ ಪ್ರವೇಶ ಬಾಗಿಲಿನ ಮೇಲ್ಭಾಗದಲ್ಲಿ ಎದುರುದಾರರ ಹೆಸರಿನ ನಾಮಫಲಕವಿರುತ್ತದೆ. ಸದರಿ ಕೊಠಡಿಯಲ್ಲಿ ಒಂದು ಎಕ್ಸಿಕ್ಯುಟಿವ್ ಚೇರ್‌ನಲ್ಲಿ ಕುಳಿತಿದ್ದವರ ಹೆಸರನ್ನು ಕೇಳಿದಾಗ ಎದುರುದಾರರು ತಮ್ಮ ಹೆಸರನ್ನು ತನಿಖಾಧಿಕಾರಿಯವರಿಗೆ ತಿಳಿಸಿರುತ್ತಾರೆ. ಎದುರುದಾರರ ಅಂಗ ಶೋಧನೆ ಮಾಡಲಾಗಿ ಪ್ಯಾಂಟಿನ ಹಿಂಬದಿಯ ಕಿಸೆಯಲ್ಲಿ ಒಂದು ಕಪ್ಪುಬಣ್ಣದ ಪರ್ಸ್ ಇದ್ದು, ಅದರಲ್ಲಿ ರೂ.1,000/- ಮುಖಬೆಲೆಯ 10 ನೋಟುಗಳು, 100/- ರೂ. ಮುಖಬೆಲೆಯ 3 ನೋಟುಗಳು, ಒಟ್ಟು 10,300/- ಹಣ ಇದ್ದು, ಎದುರುದಾರರು ಕುಳಿತ್ತಿದ್ದ ಬಲಬದಿಯ ಮೇಲ್ಭಾಗದ ಡ್ರಾವರ್‌ನಲ್ಲಿ ನಗದು ಹಣ ಇರುವುದು ಕಂಡುಬಂದಿರುತ್ತದೆ. ಸದರಿ ನಗದು ಹಣವನ್ನು ತನಿಖಾಧಿಕಾರಿಯವರು ಪಂಚರಿಂದ ತೆಗೆಯಿಸಿ, ಹಣವನ್ನು ಪರಿಶೀಲಿಸಲಾಗಿ, ರೂ.1,000/- ಮುಖಬೆಲೆಯ 2 ನೋಟುಗಳು ಮತ್ತು ರೂ.500/- ಮುಖಬೆಲೆಯ 2 ನೋಟುಗಳು ಒಟ್ಟು ರೂ.3,000/- ಹಣವಿರುತ್ತದೆ. ಅದೇ ಡ್ರಾವರ್‌ನಲ್ಲಿ ಒಂದು ಬಿಳಿಬಣ್ಣದ ಕವರ ಇದ್ದು, ಅದನ್ನು ತನಿಖಾಧಿಕಾರಿಯವರು ಪಂಚರಿಂದ ತೆಗೆಯಿಸಿ ಪರಿಶೀಲಿಸಿದಾಗ ಅದರಲ್ಲಿ ರೂ.500/- ಮುಖಬೆಲೆಯ 10 ನೋಟುಗಳು ಒಟ್ಟು ರೂ.5,000/- ಹಣವಿರುತ್ತದೆ. ಎದುರುದಾರರ ಪರ್ಸ್‌ನಲ್ಲಿ ಮತ್ತು ಟೇಬಲ್ ಡ್ರಾವರ್‌ನಲ್ಲಿ ಪತ್ತೆಯಾದ ಒಟ್ಟು ಹಣವಾದ ರೂ.18,300/- ಹಣದ ಬಗ್ಗೆ ತನಿಖಾಧಿಕಾರಿಯವರು ವಿವರಣೆ ಕೇಳಿದಾಗ ಎದುರುದಾರರು ತನಿಖಾಧಿಕಾರಿಯವರಿಗೆ ಸಮಂಜಸವಾದ ಉತ್ತರವನ್ನು ನೀಡದೇ ಇದ್ದುದರಿಂದ, ಸದರಿ ಹಣವು ಈ ದಿನ ಸಂಗ್ರಹಿಸಲಾದ ಅಕ್ರಮ ಹಣವಾಗಿರುತ್ತದೆ ಎಂದು ತಿಳಿದುಬಂದಿರುತ್ತದೆ. ಈ ಬಗ್ಗೆ ತನಿಖಾಧಿಕಾರಿಯವರು ಎದುರುದಾರರಿಗೆ ತಮ್ಮ ಸಮಜಾಯಿಷಿಯನ್ನು ನೀಡುವಂತೆ ತಿಳಿಸಿದಾಗ, ಎದುರುದಾರರು ತಮ್ಮ ಪರ್ಸ್‌ನಲ್ಲಿ ರೂ.10,300/- ಹಣವಿದ್ದು, ಅದನ್ನು ತಮ್ಮ ಸ್ನೇಹಿತನಾದ ವಸಂತ್ ಎಂಬುವವರಿಂದ ಪಡೆದಿದ್ದು, ಅದನ್ನು ತಮ್ಮ ಇನ್ನೊಬ್ಬ ಸ್ನೇಹಿತನಾದ ರವೀಂದ್ರರವರಿಗೆ ನೀಡಲು ತಮ್ಮ ಹತ್ತಿರ ನೀಡಿದ್ದರು. ತಮ್ಮ ಡ್ರಾವರ್‌ನಲ್ಲಿ ರೂ.3,000/-

ಮತ್ತು 5,000/-ಗಳನ್ನು ತಮ್ಮ ಸ್ನೇಹಿತ ಈ ದಿನ ಕಡೆಕಾರು ಪಂಚಾಯತಿಯಿಂದ ಕೆಲಸ ಮುಗಿಸಿಕೊಂಡು ಬರುವ ಸಂದರ್ಭದಲ್ಲಿ ನೀಡಿದ್ದು, ಅದನ್ನು ರವೀಂದ್ರರವರಿಗೆ ಡ್ಯೂಟಿ ಮುಗಿದ ನಂತರ ನೀಡಲು ಪಡೆದಿರುತ್ತೇನೆಂದು ಬರೆದು ನೀಡಿರುವ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಯವರು ಪಂಚರಲ್ಲಿ ಅಭಿಪ್ರಾಯವನ್ನು ಕೇಳಿದಾಗ ಪಂಚರು ಎದುರುದಾರರು ನೀಡಿದ ವಿವರಣೆಯು ಸಮಂಜಸವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

8) ಎದುರುದಾರರ ಪರ್ಸ್‌ನಲ್ಲಿದ್ದ ರೂ.10,300/-, ಡ್ರಾವರ್‌ನಲ್ಲಿದ್ದ ರೂ.3,000/- ಮತ್ತು ಬಿಳಿ ಕವರ್‌ನಲ್ಲಿದ್ದ ರೂ.5,000/- ಒಟ್ಟು ರೂ.18,300/- ಹಣವನ್ನು ತನಿಖಾಧಿಕಾರಿಯವರು ಮುಂದಿನ ತನಿಖೆಗಾಗಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಹಣವಿದ್ದ ಬಿಳಿ ಕವರನ್ನು ಸಹ ತನಿಖಾಧಿಕಾರಿಯವರು ಅಮಾನತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಪರ್ಸ್‌ನಲ್ಲಿದ್ದ ರೂ.10,300/- ಹಣವನ್ನು ಸ್ವಾಧೀನಪಡಿಸಿಕೊಂಡು ಪರ್ಸ್‌ನ್ನು ಎದುರುದಾರರ ವಶಕ್ಕೆ ಬಿಟ್ಟುಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರನ್ನು ದಸ್ತಗಿರಿ ಮಾಡಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

9) ಎದುರುದಾರರಲ್ಲಿ ಬಾಕಿಯಿದ್ದ ಕಡತಗಳ ಬಗ್ಗೆ ತನಿಖಾಧಿಕಾರಿಯವರು ಎದುರುದಾರರನ್ನು ವಿಚಾರಿಸಿದಾಗ ಎದುರುದಾರರು ತಮ್ಮ ಬಳಿ ಒಟ್ಟು 17 ಕಟ್ಟಡ ಕಾರ್ಮಿಕರ ನೋಂದಣಿ ಅರ್ಜಿಗಳ ಕಡತಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಿ ಕಡತಗಳ ಬಗ್ಗೆ ಎದುರುದಾರರನ್ನು ವಿಚಾರಿಸಿದಾಗ, ಕಟ್ಟಡ ಕಾರ್ಮಿಕರು ಕೆಲಸ ಮಾಡುತ್ತಿರುವ ಬಗ್ಗೆ ಪರಿಶೀಲನೆ ನಡೆಸಿ, ಅವರಿಗೆ ಗುರುತಿನ ಚೀಟಿಯನ್ನು ನೀಡಬೇಕಾಗಿರುವುದರಿಂದ ಕಡತ ವಿಲೇವಾರಿ ಮಾಡಲು ವಿಳಂಬವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಅಲ್ಲಿದ್ದ ನಮೂನೆ-8ನ್ನು ಜೆರಾಕ್ಸ್ ಮಾಡಿಸಿ ಅದನ್ನು ಕಾರ್ಮಿಕ ಅಧಿಕಾರಿಯಾದ ಹೆಚ್. ಪಿ. ಜ್ಞಾನೇಶ್‌ರವರಿಂದ ದೃಢೀಕರಿಸಿ ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

10) ಎದುರುದಾರರ ಕೋಣೆಯಲ್ಲಿದ್ದ ಹಣ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರದ ರಶೀದಿ ಪುಸ್ತಕವನ್ನು ಪರಿಶೀಲಿಸಿದಾಗ ರಶೀದಿ ಪುಸ್ತಕ ಸಂಖ್ಯೆ 29376 ಆಗಿದ್ದು, ಪುಸ್ತಕದ ರ್‍ಯಾಪರ್ ಮೇಲೆ ರಶೀದಿ ಸಂಖ್ಯೆ 2937501 ರಿಂದ 2937600ರವರೆಗೆ ಇದೆ ಎಂದು ದಿ: 18/07/2014ರಂದು ಎದುರುದಾರರು ರುಜು ಮಾಡಿರುತ್ತಾರೆ. ಸದರಿ ರಶೀದಿ ಪುಸ್ತಕದ ಕೊನೆಯ ರಶೀದಿ ಸಂಖ್ಯೆ 2937600 ಆಗಿದ್ದು, ಮೆ॥ ಮಣಿಪಾಲ್ ಸ್ಟೋರ್, ಮಣಿಪಾಲ್ ಇವರಿಂದ ರೂ.500/-ನ್ನು ದಿ: 25/07/2014ರಂದು ಸ್ವೀಕರಿಸಿ ನಮೂದಿಸಿದ್ದು, ಅದನ್ನು ತನಿಖಾಧಿಕಾರಿಯವರು ಜೆರಾಕ್ಸ್ ಮಾಡಿಸಿ, ಕಾರ್ಮಿಕ ಅಧಿಕಾರಿಯಾದ ಹೆಚ್. ಪಿ. ಜ್ಞಾನೇಶ್‌ರವರಿಂದ ದೃಢೀಕರಿಸಿ, ಸ್ವಾಧೀನಪಡಿಸಿಕೊಂಡಿರುತ್ತಾರೆ.

11) ಎದುರುದಾರರ ಕೊಠಡಿಯ ಪೂರ್ವದಿಕ್ಕಿನಲ್ಲಿ ಇನ್ನೊಂದು ಕೊಠಡಿಯಿದ್ದು, ಕೊಠಡಿಯ ಒಳಗೆ ಬಾಗಿಲಿನ ಮೇಲ್ಭಾಗದಲ್ಲಿ ಶ್ರೀ. ಜೀವನ್ ಕುಮಾರ್ ಕೆ. ಹೆಚ್, ಕಾರ್ಮಿಕ ನಿರೀಕ್ಷಕರು, ಉಡುಪಿ, 2ನೇ ವೃತ್ತ ಎಂದು ಬರೆದಿರುವ ನಾಮಫಲಕವಿದ್ದು, ಸದರಿ ಕೊಠಡಿಯಲ್ಲಿ ಟೇಬಲ್ ಹಾಗೂ ಎಕ್ಸಿಕ್ಯುಟಿವ್ ಚೇರ್ ಇದ್ದು ಎಕ್ಸಿಕ್ಯುಟಿವ್ ಚೇರ್‌ನಲ್ಲಿ ಕುಳಿತ್ತಿದ್ದವರ ಹೆಸರನ್ನು ತನಿಖಾಧಿಕಾರಿಯವರು ಕೇಳಿದಾಗ, ಅವರು ತಮ್ಮ ಹೆಸರು ಶ್ರೀ. ಜೀವನ್ ಕುಮಾರ್ ಕೆ.ಹೆಚ್. ಕಾರ್ಮಿಕ ನಿರೀಕ್ಷಕರು ಎಂಬುದಾಗಿ ತಿಳಿಸಿದಾಗ, ತನಿಖಾಧಿಕಾರಿಯವರು ಅವರ ಅಂಗ ಶೋಧನೆ ಮಾಡಿದಾಗ ಅವರ ಪ್ಯಾಂಟಿನ ಹಿಂಬದಿಯ ಕಿಸೆಯಲ್ಲಿ

ಒಂದು ಪರ್ಸ್ ಇದ್ದು, ಅದರಲ್ಲಿ ರೂ.1,000/– ಮುಖಬೆಲೆಯ ನೋಟುಗಳು ಒಟ್ಟು ರೂ.12,000/– ಹಣವಿರುತ್ತದೆ. ಸದರಿ ಹಣದ ಬಗ್ಗೆ ಜೀವನ್ ಕುಮಾರ್‌ರವರಿಗೆ ವಿಚಾರಿಸಿದಾಗ ಅವರು ತನ್ನಲ್ಲಿರುವ ಮೊಬೈಲ್ ನಂ.9449809562ರಲ್ಲಿರುವ ಎಸ್.ಎಂ.ಎಸ್. ನ್ನು ತೋರಿಸಿ ತಾನು ದಿ: 29/07/2014ರಂದು ರೂ.20,000/– ಹಣವನ್ನು ತೆಗೆದಿದ್ದು, ಅದರಲ್ಲಿ ಖರ್ಚಾಗಿ ರೂ.12,000/– ಹಣ ಉಳಿದಿದ್ದು, ತಾನು ಮನೆ ನಿರ್ಮಾಣದ ಬಗ್ಗೆ ಸಿಮೆಂಟ್ ಖರೀದಿಸಲು ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಅವರ ಎಸ್.ಬಿ.ಎಂ. ಶಾಖೆಯ ಎಟಿಎಂ ಗೆ ಹೋಗಿ ಒಂದು ಮಿನಿ ಸ್ಟೇಟ್‌ಮೆಂಟನ್ನು ತರಲು ಹೇಳಿದ್ದರಿಂದ ಜೀವನ್ ಕುಮಾರ್‌ರವರು ರಜತಾದ್ರಿಯಲ್ಲಿರುವ ಎಟಿಎಂಗೆ ಹೋಗಿ ಒಂದು ಮಿನಿ ಸ್ಟೇಟ್‌ಮೆಂಟನ್ನು ತಂದು ಹಾಜರುಪಡಿಸಿದ್ದನ್ನು ತನಿಖಾಧಿಕಾರಿಯವರು ಪರಿಶೀಲಿಸಿದಾಗ ಅದರಲ್ಲಿ ಜೀವನ್ ಕುಮಾರ್‌ರವರು ದಿ: 29/07/2014ರಂದು ರೂ.20,000/– ಹಣವನ್ನು ಎಟಿಎಂ ನಿಂದ ಡ್ರಾ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಸ್ಟೇಟ್‌ಮೆಂಟ್‌ನಲ್ಲಿರುವ ವಿವರವು ಅಳಿಸಿಹೋಗುವ ಸಾಧ್ಯತೆಯಿರುವುದರಿಂದ ಅದನ್ನು ಜೆರಾಕ್ಸ್ ಮಾಡಿಸಿ ಜೆರಾಕ್ಸ್ ಪ್ರತಿಯನ್ನು ತನಿಖಾಧಿಕಾರಿಯವರು ಮುಂದಿನ ತನಿಖೆಗಾಗಿ ತಮ್ಮ ಕಡತದಲ್ಲಿ ಅಳವಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಜೀವನ್ ಕುಮಾರ್‌ರವರ ಬಳಿಯಿದ್ದ ಕಡತಗಳ ಬಗ್ಗೆ ವಿಚಾರಿಸಿದಾಗ ಅವರು ತನ್ನಲ್ಲಿ ಯಾವುದೇ ಕಡತದ ಕೆಲಸ ಬಾಕಿಯಿರುವುದಿಲ್ಲ ಹಾಗೂ ತಾನು ದಿ: 14/07/2014ರಂದು ಈ ಕಛೇರಿಯ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ.

12) ಜೀವನ್ ಕುಮಾರ್‌ರವರ ಕೊಠಡಿಯ ಪೂರ್ವಬದಿಯಲ್ಲಿ ಇನ್ನೊಂದು ಕೊಠಡಿಯಿದ್ದು, ಸದರಿ ಕೊಠಡಿಯು ರೆಕಾರ್ಡ್ ರೂಂ ಆಗಿದ್ದು, ಅಲ್ಲಿಯ ಕಡತಗಳನ್ನು ತನಿಖಾಧಿಕಾರಿಯವರು ಪರಿಶೀಲಿಸಿದ್ದು, ಅವು ಕಛೇರಿಗೆ ಸಂಬಂಧಿಸಿದ ಕಡತಗಳಾಗಿದ್ದು, ಅದರಲ್ಲಿ ಯಾವುದೇ ನಗದು ಹಣ ಪತ್ತೆಯಾಗಿರುವುದಿಲ್ಲ.

13) ಸದರಿ ಸ್ಟೋರ್ ರೂಂನ ಉತ್ತರಬದಿಯಲ್ಲಿ ಸಂದರ್ಶಕರು ಕುಳಿತುಕೊಳ್ಳುವ ಆಸನಗಳಿದ್ದು, ಆ ಆಸನಗಳಲ್ಲಿ ಮೂವರು ವ್ಯಕ್ತಿಗಳು ಕುಳಿತುಕೊಂಡಿದ್ದವರನ್ನು ತನಿಖಾಧಿಕಾರಿಯವರು ವಿಚಾರಿಸಿದಾಗ 1) ಇಸಾಕ್ ತಂದೆ ಹಸನಬ್ಬ, 2) ಎಡ್ವರ್ಡ್ ಡಿ'ಸೋಜಾ ತಂದೆ ಜಾನ್ ಡಿ'ಸೋಜಾ, 3) ನಾಮದೇವ್ ಜೆ. ಕಾಮತ್ ತಂದೆ ಜನಾರ್ಧನ್ ಕಾಮತ್ ಎಂಬುದಾಗಿ ತಿಳಿಸಿದ್ದರಿಂದ ತನಿಖಾಧಿಕಾರಿಯವರು ಅವರಿಗೆ ತಾವುಗಳು ಯಾಕೆ ಇಲ್ಲಿಗೆ ಬಂದಿದ್ದೀರಿ ಎಂದು ಕೇಳಿದಾಗ ಅವರು ತಾವುಗಳು ನಿರ್ವಹಿಸುವ ಅಂಗಡಿಗಳ ಲೈಸನ್ಸ್ ಬಗ್ಗೆ ವಿಚಾರಿಸಲು ಬಂದಿರುವುದಾಗಿ ನುಡಿದಿರುತ್ತಾರೆ. ತನಿಖಾಧಿಕಾರಿಯವರು ಇವರ ಹೇಳಿಕೆಗಳನ್ನು ಮುಂದಿನ ತನಿಖೆ ಕಾಲಕ್ಕೆ ಪಡೆದುಕೊಳ್ಳುವುದಾಗಿ ತಿಳಿಸಿರುತ್ತಾರೆ.

14) ತನಿಖಾಧಿಕಾರಿಯವರು ಕಾರ್ಮಿಕ ಅಧಿಕಾರಿಯವರಾದ ಶ್ರೀ. ಹೆಚ್. ಪಿ. ಜ್ಞಾನೇಶ್‌ರವರಿಗೆ ಕಛೇರಿಯ ಹಾಜರಾತಿ ಪುಸ್ತಕದ ಬಗ್ಗೆ ವಿಚಾರಿಸಿದಾಗ ಅವರು ಹಾಜರಾತಿ ಪುಸ್ತಕವನ್ನು ಹಾಜರುಪಡಿಸಿದ್ದು, ಸದರಿ ಕಛೇರಿಯ ಜುಲೈ ತಿಂಗಳ ದಿ: 30/07/2014ರ ಹಾಜರಾತಿ ಪುಸ್ತಕದ ಹಾಳೆಯನ್ನು ಜೆರಾಕ್ಸ್ ಮಾಡಿಸಿ, ಜೆರಾಕ್ಸ್ ಪ್ರತಿಗೆ ಕಾರ್ಮಿಕ ಅಧಿಕಾರಿಯವರಿಂದ ದೃಢೀಕರಿಸಿ ಅಮಾನತುಪಡಿಸಿಕೊಂಡಿರುತ್ತಾರೆ.

15) ತನಿಖಾಧಿಕಾರಿಯವರು ಈ ಮಹಜರ್ ಸಮಯದ ಫೋಟೋಗ್ರಾಫಿಯನ್ನು ಮಾಡಿಕೊಂಡಿರುತ್ತಾರೆ. ಸದರಿ ಮಹಜರ್‌ನ್ನು ದಿ: 30/07/2014ರಂದು ಸಂಜೆ 5.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರ ಮುಖಾಂತರ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

16) ಎದುರುದಾರರು ತಮ್ಮ ಬಳಿ ಅಕ್ರಮ ಹಣ ಇಟ್ಟುಕೊಂಡು, ಆ ಅಕ್ರಮ ಹಣದ ಸಾಕ್ಷಾಧಾರವನ್ನು ಮರೆಮಾಚಲು ಪ್ರಯತ್ನಿಸಿ, ಕರ್ತವ್ಯಲೋಪವೆಸಗಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಯವರು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

17) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

18) ನಂತರ ಎದುರುದಾರರಿಗೆ ದಿನಾಂಕ 02/06/2022 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 19/08/2022 ರಂದು ಸಲ್ಲಿಸಿರುತ್ತಾರೆ. ಎದುರುದಾರರು ಸಲ್ಲಿಸಿದ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ ತಮ್ಮ ಶಿಸ್ತು ಪ್ರಾಧಿಕಾರಿಯಾದ ಕಾರ್ಮಿಕ ಆಯುಕ್ತರು, ಕರ್ನಾಟಕ ಲೋಕಾಯುಕ್ತ ಪೋಲಿಸರು ಅಭಿಯೋಜನಾ ಮಂಜೂರಾತಿ ಆದೇಶಕ್ಕಾಗಿ ಸಲ್ಲಿಸಿರುವ ಪ್ರಸ್ತಾವನೆಯನ್ನು ನಿರಾಕರಿಸಿದ ಆದೇಶದ ಪ್ರತಿಯನ್ನು ಸಲ್ಲಿಸಿರುತ್ತಾರೆ. ಮತ್ತು ಎದುರುದಾರರು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಕ್ರಿಮಿನಲ್ ಪಿಟಿಷನ್ ನಂ.5249/2014 ರಲ್ಲಿ ಆದ ಆದೇಶದ ಪ್ರತಿಯನ್ನು ಹಾಗೂ ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದಂತಹ ಡಬ್ಲ್ಯೂಪಿ ನಂ. 30034/2017(ಜಿಎಮ್-ಆರ್‌ಇಎಸ್) ರಲ್ಲಿ ಕಾರ್ಮಿಕ ಆಯುಕ್ತರು, ಸಲ್ಲಿಸಿದಂತಹ ಆಕ್ಷೇಪಣೆಯ ಪ್ರತಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ತನ್ನ ಶಿಸ್ತು ಪ್ರಾಧಿಕಾರವು ಅಭಿಯೋಜನಾ ಮಂಜೂರಾತಿಯನ್ನು ನಿರಾಕರಿಸಿರುವುದರಿಂದ ತನ್ನ ಮೇಲೆ ಯಾವುದೇ ಪ್ರಕರಣವು ಚಾಲ್ತಿಯಲ್ಲಿರುವುದಿಲ್ಲ ಎಂದು ಹೇಳಿ ಆಪಾದನೆಗಳನ್ನು ನಿರಾಕರಿಸುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಎದುರುದಾರರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

19) ಎದುರುದಾರರು ತಮ್ಮ ಬಳಿ ಅಕ್ರಮ ಹಣ ಇಟ್ಟುಕೊಂಡು ಆ ಅಕ್ರಮ ಹಣದ ಸಾಕ್ಷ್ಯಾಧಾರವನ್ನು ಮರೆಮಾಚಲು ಪ್ರಯತ್ನಿಸಿ ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

20) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಆರ್.ರವಿಕುಮಾರ ತಂದೆ ದಿ:ರಂಗಸ್ವಾಮಿ, ಕಾರ್ಮಿಕ ನಿರೀಕ್ಷಕರು, ಉಡುಪಿ, 1ನೇ ವೃತ್ತ, ಕಾರ್ಮಿಕ ಅಧಿಕಾರಿಯವರ ಕಛೇರಿ, ರಜತಾದ್ರಿ ಮಣಿಪಾಲ, ಉಡುಪಿ ಜಿಲ್ಲೆ, (ನಿವೃತ್ತಿ ದಿ:31/05/2040), ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

21) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/10/22

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.